ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ

ದಿನಾಂಕ : DATE: 28/3/21

### ಸಹೋದರನೊಂದಿಗೆ ಸಂಭಾಷಣೆಯ ಕ್ಲಿಪ್ಪಿಂಗ್ ರಮೇಶ್ ಜಾರಕಿಹೊಳಿ ವಿರುದ್ಧ ಆಕ್ರೋಶ

# ಒಂದೇ ದಿನದಲ್ಲಿ ಎರಡು ಆಡಿಯೋ ಎರಡು ವಿಡಿಯೋ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು 28-3-21

ಸಿ.ಡಿ. ಹಗರಣ ಕ್ಷಣಕ್ಷಣಕ್ಕೂ ತಾರಕಕ್ಕೆ ಏರುತ್ತಿದೆ. ಮಾಜಿ ಸಚಿವರ ಕಟುವಾದ ಪ್ರತಿಕ್ರಿಯೆಗೆ ಯುವತಿ ಸಹ ತೀಕ್ಷ್ಣವಾಗಿ ಪ್ರತಿಕ್ರಿಯೆ ನೀಡುತ್ತಿದ್ದು, ಹಾವು ಏಣಿ ಆಟವಾಗುತ್ತಿದೆ. ಶುಕ್ರವಾರವಷ್ಟೇ ಪಾಲಕರ ಜತೆ ಯುವತಿ ಮಾತನಾಡುವಾಗ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೆಸರು ಪ್ರಸ್ತಾಪ ಮಾಡಿರುವ ಆಡಿಯೋ ವೈರಲ್ ಆಗಿತ್ತು. ಇದಕ್ಕೆ ಪ್ರತಿಯಾಗಿ ಶನಿವಾರ ಬೆಳ್ಳಂಬೆಳಗ್ಗೆಯೇ ಯುವತಿ, ವಿಡಿಯೋ ಬಿಡುಗಡೆ ಮಾಡಿ ಡಿಕೆಶಿ ಮತ್ತು ಪ್ರಕರಣದ ಪ್ರಮುಖ ಆರೋಪಿ ನರೇಶ್ ಪಾತ್ರ ಇಲ್ಲವೆಂದು ಸಮರ್ಥನೆ ಮಾಡಿಕೊಂಡು ರಮೇಶ್ ಜಾರಕಿಹೊಳಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಳು.



ಸಂಜೆ ವೇಳೆಗೆ ಎಸ್ಐಟಿ ವಿಚಾರಣೆ ಎದುರಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಯುವತಿಯ ಪಾಲಕರು, ಡಿಕೆಶಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದರು. ಮತ್ತೊಂದೆಡೆ ಮಾಜಿ ಸಚಿವ ಸಹ ಡಿಕೆಶಿಯನ್ನು ಕಟುವಾಗಿ ಟೀಕಿಸಿದ್ದರು. ಇದಕ್ಕೆ ಪ್ರತಿಯಾಗಿ ರಾತ್ರಿ 8.30ಕ್ಕೆ 5ನೇ ವಿಡಿಯೋ ಬಿಡುಗಡೆ ಮಾಡಿದ ಯುವತಿ, ನೇರವಾಗಿ ರಮೇಶ್ ಜಾರಕಿಹೊಳಿ ವಿರುದ್ಧ ಕಿಡಿಕಾರಿದ್ದು, ತನ್ನ ನಿಲವನ್ನು ಸಮರ್ಥನೆ ಮಾಡಿಕೊಂಡಿದ್ದಾಳೆ. ತನ್ನ ಸಹಾಯಕ್ಕಾಗಿ ಧಾವಿಸುವಂತೆ ಸಿಎಂ ಯಡಿಯೂರಪ್ಪ, ಗೃಹ ಸಚಿವ ಬಸವರಾಜ ಬೊಮ್ಮಾಯಿ, ಡಿಕೆಶಿ ಮತ್ತು ಮಾಜಿ ಸ್ಪೀಕರ್ ರಮೇಶ್‌ಕುಮಾರ್‌ಗೆ ಮನವಿ ಮಾಡಿದ್ದಾಳೆ.

5ನೇ ವಿಡಿಯೋದಲ್ಲಿ ಯುವತಿ, ಶನಿವಾರ ಆಗಿರುವ ಬೆಳವಣಿಗೆ ನೋಡುತ್ತಿದ್ದರೆ ನನಗೆ ಎಲ್ಲೋ ಒಂದು ಕಡೆ ಭಯವಾಗುತ್ತಿದೆ. ನನ್ನ ಅಪ್ಪ-ಅಮ್ಮನಿಗೆ ಏನೂ ಗೊತ್ತೇ ಇಲ್ಲ. ಪ್ರಭಾವ ಬೀರಿ ಬ್ಲ್ಯಾಕ್‌ಮೇಲ್ ಮಾಡಿ, ಎಲ್ಲೋ ಇರಿಸಿ ಅವರನ್ನ ಇವತ್ತು ಈಚೆಗೆ ಕರೆದುಕೊಂಡು ಬಂದು ಅವರ ಬಾಯಿಂದ ಏನೇನೋ ಹೇಳಿಸುತ್ತಿದ್ದಾರೆ. ಅವರಿಗೆ ಏನಾಗಿದೆ ಅಂತನೂ ಗೊತ್ತಿಲ್ಲ. ಏನೇನೋ ಹೇಳಿಸುತ್ತಾರೆ. ಈ ಕೇಸ್‌ನಲ್ಲಿ ಅನ್ಯಾಯ ಆಗಿರುವುದು ನನಗೆ. ಅನ್ಯಾಯ ಮಾಡಿರುವುದು ಮಾಜಿ ಸಚಿವ. ಅವರ ಮನೆಯವರನ್ನು ಯಾರೂ ಕರೆದು ವಿಚಾರಣೆ ಮಾಡುತ್ತಿಲ್ಲ. ನಮ್ಮ ಮನೆಯವರನ್ನು ಕರೆದೊಯ್ದು ಏನೇನೋ ವಿಚಾರಣೆ ಮಾಡಿ ಏನೇನೋ ಹೆಸರು ಹೇಳಿಸಿಬಿಟ್ಟು ಈ ಕೇಸ್ ಅನ್ನು ಬೇರೆ ತರಹನೇ ತಿರುಗಿಸುತ್ತಿದ್ದಾರೆ. ನ್ಯಾಯ ಸಿಗಬೇಕಾಗಿರುವುದು ನನಗೆ. ಮೊದಲು ನನ್ನ ಬಗ್ಗೆ ಮಾತನಾಡಬೇಕು. ಅದು ಬಿಟ್ಟು ಅವರ ಬಗ್ಗೆ, ಇವರ ಬಗ್ಗೆ..ಅದೆಲ್ಲ ನನಗೆ ಬೇಡ. ನಾನು ಎಲ್ಲರ ಬಳಿ ಮನವಿ ಮಾಡುವುದು ಇಷ್ಟೇ. ನ್ಯಾಯಾಧೀಶರ ಬಳಿ ಹೇಳಿಕೆ ಕೊಡಲು ಸಹಾಯ ಮಾಡಿ ಎಂದಿದ್ದಾಳೆ.

## ಫೋನ್ ಕಸಿದುಕೊಂಡಿದ್ದಾರೆ...

ಯುವತಿ ತನ್ನ ಸಹೋದರನ ಜತೆ ಮಾತನಾಡಿರುವ ಮತ್ತೊಂದು ಆಡಿಯೋ ರಿವೀಲ್ ಆಗಿದೆ. ಅದರಲ್ಲಿ ಯುವತಿ, 'ಯಾರು ಕೇಳಿದರೂ ಗೊತ್ತಿಲ್ಲ. ಬೆಂಗಳೂರಿನಲ್ಲೇ ಇದ್ದಾಳೆ. ಆರ್.ಟಿ.ನಗರದಲ್ಲಿ ಇರಲ್ಲ. ಸಂಜಯ್‌ನಗರ ಅಥವಾ ವಿಜಯನಗರದಲ್ಲಿ ಇದ್ದಾಳೆ' ಎಂದು ಹೇಳುತ್ತಾಳೆ. ಇದಕ್ಕೆ ಪ್ರತಿಕ್ರಿಯಿಸುವ ಸಹೋದರ, ಈ ಸಿಮ್‌ಕಾರ್ಡ್ ತೆಗಿ ಎಂದು ಸಲಹೆ ಕೊಡುತ್ತಾನೆ. ಆಗ ಯುವತಿ, ಎಲ್ಲ ತೆಗೆದಾಯ್ತು. ನಮ್ಮ ಫೋನ್ ಕಸಿದುಕೊಂಡಿದ್ದಾರೆ. ಬೇಸಿಕ್ ಸೆಟ್ ಮೊಬೈಲ್ ಕೊಡಿಸಿದ್ದಾರೆ. ಆಕಾಶಂದು ಫೋನ್ ಇದೆ. ಆ ಫೋನ್ ಟ್ರ್ಯಾಕ್ ಮಾಡಲು ಆಗುವುದಿಲ್ಲ. ಆಕಾಶ್ ಸೇರಿ 7-8 ಮಂದಿ ಬಂದಿದ್ದೇವೆ. ನಾವೆಲ್ಲ ಹೊರಟಿದ್ದೇವೆ ಎಂದು ಯುವತಿ ಹೇಳುತ್ತಾಳೆ. ಆಕೆಯನ್ನು ಯಾರೋ ಕರೆಯುವ ಧ್ವನಿಯೂ ಕೇಳಿಸುತ್ತಿತ್ತು. ಆಕೆ ಏನೂ ಆಗುವುದಿಲ್ಲ ಎಂದು ಹೇಳಿ ಕರೆ ಕಡಿತಗೊಳಿಸಿದ್ದಾಳೆ. ಮತ್ತೊಂದು ಕರೆಯಲ್ಲಿ 'ಪಿಜಿಗೆ ಬಂದಿದ್ದಿಯಾ' ಎಂದು ಸಹೋದರ ಕೇಳುತ್ತಾನೆ. ಇದಕ್ಕೆ ಯುವತಿ 'ಬಂದೆ ಹೇಳಪ್ಪ' ಎಂದು ಪ್ರತಿಕ್ರಿಯಿಸುತ್ತಾಳೆ. ಊಟ ಆಯಿತಾ ಎಂದು ಸಹೋದರ ಕೇಳಿದಾಗ ಆಯಿತಪ್ಪ, ಊಟ ಮಾಡು ಚಿನ್ನಿ ಎಂದು ಸಹೋದರನಿಗೆ ಹೇಳುತ್ತಾಳೆ. ಊರಿಗೆ ಯಾವಾಗ ಬರುತ್ತೀ ಎಂದಾಗ, 4-5 ದಿನ. ನನಗೆ ಈಗ ಹೋಗಬೇಡ ಎಂದು ಹೇಳಿದ್ದಾರೆ ಅವರು. ಊರಿಗೆಲ್ಲ ಹೋಗುವಾಗ ಇಲ್ಲ ಎಂದು ಹೇಳಿದಾಗ ಕರೆ ಕಡಿತಗೊಳ್ಳುತ್ತದೆ.

## ಕೊಲ್ಲಲೂ ಹಿಂದೇಟು ಹಾಕುವುದಿಲ್ಲ

ಬೆಂಗಳೂರು: ಸಿಡಿಯಲ್ಲಿರುವ ಯುವತಿ ಶನಿವಾರ ಬೆಳಗ್ಗೆ ಮತ್ತೆ ಅಜ್ಞಾತ ಸ್ಥಳದಿಂದ 4ನೇ ಬಾರಿ ವಿಡಿಯೋ ಬಿಡುಗಡೆ ಮಾಡಿ, ಮಾಜಿ ಸಚಿವರು ನನ್ನನ್ನು ಮತ್ತು ನನ್ನ ಕುಟುಂಬವನ್ನು ಕೊಲ್ಲಲ್ಲು ಹಿಂದೇಟು ಹಾಕುವುದಿಲ್ಲ. ಇದನ್ನೆಲ್ಲ ನೋಡಿದರೆ ರಮೇಶ್ ಜಾರಕಿಹೊಳಿ ಹೆಸರು ಬರೆದಿಟ್ಟು ಸಾಯಬೇಕು ಎನಿಸುತ್ತಿದೆ ಎಂದು ಹೇಳಿದ್ದಾಳೆ. ನಮ್ಮ ಅಪ್ಪ ಅಮ್ಮ ಎಲ್ಲಿದ್ದಾರೆ ಗೊತ್ತಿಲ್ಲ. ಅವರಿಗೆ ಶೇ.1ರಷ್ಟು ಭದ್ರತೆ ಇಲ್ಲ ಎಂದು ಎನಿಸುತ್ತಿದೆ. ನಾನು ಸೇಫ್ ಆಗಿದ್ದೀನಿ. ನನ್ನನ್ನು ಯಾರೂ ಕಿಡ್ನ್ಯಾಪ್ ಮಾಡಿಲ್ಲ. ನನಗೆ 24 ದಿನದಿಂದ ಎಷ್ಟು ಟಾರ್ಚರ್ ಆಗುತ್ತಿದೆ. ಏನು ಮಾಡಬೇಕಂತ ಒಂದೂ ಗೊತ್ತಾಗುತ್ತಿಲ್ಲ. ಎಷ್ಟು ಕಷ್ಟ ಬೀಳುತ್ತಿದ್ದೇನೆ? ಏನೇನೆಲ್ಲಾ ಆಗುತ್ತಿದೆ? ನನ್ನ ಮಾನ ಮರ್ಯಾದೆ ಹೋಗಿದೆ. ನನಗೆ ನ್ಯಾಯ ಕೊಡಿಸಿ ಎಂದು ಕೇಳಿಕೊಂಡಿದ್ದಾಳೆ.

» ನಾಲ್ಕನೇ ವಿಡಿಯೋ ಬಿಡುಗಡೆ ಮಾಡಿದ ಸಿಡಿ ಲೇಡಿ